# ವಿಶ್ವ ವಾಙ್ಮಯಕ್ಕೊಂದು ಅನರ್ಘ್ಯ ಭೂಷಣ

ವಿದ್ವಾನ್ ಹೆಚ್. ವಿ. ನಾಗರಾಜ ರಾವ್

**A Concise Encyclopedia of Hinduism**

(In Three Volumes)

**ಲೇಖಕರು :** ಸ್ವಾಮಿ ಹರ್ಷಾನಂದ

**ಪ್ರಕಾಶಕರು:** ರಾಮಕೃಷ್ಣ ಮಠ, ಬಸವನಗುಡಿ ರಸ್ತೆ, ಬೆಂಗಳೂರು – ೫೬೦ ೦೧೯

**ಪುಟಗಳು:** ೬೭೧+೬೦೮+೭೦೩ ಮತ್ತು ಪ್ರತಿಸಂಪುಟದಲ್ಲಿ ಪ್ರತ್ಯೇಕವಾದ ಚಿತ್ರವಿಭಾಗವಿದೆ

**ಬೆಲೆ:** ೧೫೦೦/-

ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಸಾಧಾರಣವಾದ ಪ್ರಭುತ್ವ, ಹಲವು ಭಾಷೆಗಳ ಪರಿಚಯ, ವೇದೋಪನಿಷತ್ತುಗಳ ಆಳವಾದ ಅಧ್ಯಯನ, ಹಳೆ ಬೇರು ಹೊಸ ಚಿಗುರು ಸೇರಿದಂತೆ ಪ್ರಾಚೀನ ಜ್ಞಾನ – ನವೀನ ವಿಜ್ಞಾನಗಳ ಉಚಿತವೂ ಖಚಿತವೂ ಆದ ಅರಿವು, ಋಷಿಗಳಲ್ಲಿ ಮಾತ್ರ ಕಾಣಲು ಸಿಕ್ಕುವ ವೈರಾಗ್ಯ, ಬರವಣಿಗೆಯಲ್ಲಿ ಅಚ್ಚಳಿಯದ ವಸ್ತುನಿಷ್ಠತೆ – ಇವೆಲ್ಲವೂ ಒಬ್ಬ ವ್ಯಕ್ತಿಯಲ್ಲಿ ಮೇಳೈಸಿರುವುದೇ ಒಂದು ಅದ್ಭುತ. ಅದು ಒಟ್ಟಿಗೆ ಸೇರಿ ಮಾಗಿ, ಪರಿಪಕ್ವವಾಗಿ ಗ್ರಂಥರೂಪವನ್ನು ಪಡೆದು ನಮ್ಮ ಕೈಗಳಿಗೆ ಬಂದಿರುವುದು ಸುಕೃತ ವಿಶೇಷ. ಇದೇ ಪರಮ ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ರಚಿಸಿರುವ 'ಸಂಕ್ಷಿಪ್ತ ಹಿಂದೂ ವಿಶ್ವಕೋಶ' ದ ವೈಶಿಷ್ಟ್ಯ.

ಗ್ರಂಥದ ಶಿರೋನಾಮೆಯಲ್ಲಿ concise (ಸಂಕ್ಷಿಪ್ತ) ಎಂಬ ವಿಶೇಷಣ ಪದವಿದ್ದರೂ, ಇದು ಪರಿಪೂರ್ಣ ಕೃತಿರತ್ನ ಎಂಬುದು ಪ್ರಥಮ ನೋಟದಲ್ಲೇ ತಿಳಿಯುತ್ತದೆ. ದೊಡ್ಡ ಆಕಾರದ ಮೂರು ಸಂಪುಟಗಳು, ಒಟ್ಟು ಎರಡು ಸಾವಿರ ಸಂಖ್ಯೆಯನ್ನು ಮೀರಿದ ಪುಟಗಳು, ಸುಂದರವಾದ ನಿರ್ದೋಷವಾದ ಮುದ್ರಣ, ಪ್ರಸನ್ನ ಗಂಭೀರವಾದ ಭಾಷೆ – ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ಭಾರತಕ್ಕೆ ಗೌರವವನ್ನು ಗಳಿಸಿಕೊಡುವ ಜಗದಾಚಾರ್ಯಗ್ರಂಥ A Concise Encyclopedia of Hinduism.

ಲೇಖಕರು ಸಂಸ್ಕೃತ ವಿದ್ವಾಂಸರು; ದೇಶವಿದೇಶಗಳಲ್ಲಿ ಸಂಸ್ಕೃತ ಮತ್ತು ವೇದಾಂತಗಳನ್ನು ಬೋಧಿಸುತ್ತಿರುವ ಮಹನೀಯರು. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ನಿವೃತ್ತ ಸಂಶೋಧಕರು.

ವಿಷಯಗಳನ್ನು ಇಲ್ಲಿ ವೈಜ್ಞಾನಿಕವಾಗಿ, ಅಚ್ಚುಕಟ್ಟಾಗಿ ಆಂಗ್ಲವರ್ಣಮಾಲೆಯ ಅಕ್ಷರಾನುಕ್ರಮದಲ್ಲಿ ಜೋಡಿಸಲಾಗಿದೆ. ಗ್ರಂಥಗಳು, ಗ್ರಂಥಕಾರರು, ಪವಿತ್ರ ಸ್ಥಳಗಳು, ಪರಿಕಲ್ಪನೆಗಳು, ಶಾಸ್ತ್ರಗಳು, ವಿಚಾರಗಳು, ಆಚಾರ್ಯರು, ಚಿಂತನಕಾರರು, ನದಿಗಳು, ಪುರಾಣಗಳು ಇತ್ಯಾದಿ ಇತ್ಯಾದಿ ಹಲವು ಹತ್ತು ವಿಷಯಗಳು ಈ ವಿಶ್ವಕೋಶದಲ್ಲಿ ಅಡಕವಾಗಿವೆ. ಎಲ್ಲ ವಿಷಯಗಳ ಬಗೆಗೆ ಕೊಟ್ಟಿರುವ ಮಾಹಿತಿ ಅಧಿಕೃತ. ಒಂದೊಂದರ ಬಗೆಗೂ ಗ್ರಂಥಕಾರರಾದ ಪರಮಪೂಜ್ಯರು ವಹಿಸಿರುವ ಕಾಳಜಿ ಅನುಕರಣೀಯ, ಅಭಿನಂದನೀಯ.

ಉದಾಹರಣೆಗೆ ಒಂದು ವಿಷಯವನ್ನೆತ್ತಿಕೊಳ್ಳೋಣ. ರಾಮಾಯಣ ಯಾರಿಗೆ ಗೊತ್ತಿಲ್ಲ? ರಾಮನ ಕಥೆ ಭಾರತದಲ್ಲಿ ಮಕ್ಕಳಿಗೂ ಪರಿಚಿತ. ಆದರೆ ರಾಮಾಯಣದ ಐತಿಹಾಸಿಕ ವಾಸ್ತವತೆ, ರಾಮನ ಜೀವಿತದ ಘಟನೆಗಳ ಖಚಿತ ವರ್ಷಗಳು – ಇವುಗಳ ಬಗೆಗೆ ಎಷ್ಟು ಜನರು ಬಲ್ಲರು? ಈ ಎಲ್ಲ ಮಾಹಿತಿಯನ್ನು ನಾವೇ ಪಡೆಯಬೇಕಾದರೆ ಎಷ್ಟು ಪುಸ್ತಕಗಳನ್ನು ಓದಬೇಕೋ? ಭೂಮಿಯಲ್ಲಿ ಬೀಜವನ್ನು ಬಿತ್ತಿ, ಧಾನ್ಯವನ್ನು ಬೆಳೆದು, ಮನೆಗೆ ತಂದು, ಬೇಯಿಸಿ, ಸಾಂಬಾರ ಪದಾರ್ಥಗಳನ್ನು ಸೇರಿಸಿ, ರಸವತ್ತಾಗಿ ಮಾಡಿ ತಿಂಡಿಯನ್ನು ತಟ್ಟೆಯಲ್ಲಿ ಬಡಿಸಿಕೊಟ್ಟರೆ ತಿನ್ನುವುದು ಸುಲಭ. ಅದರ ಹಿಂದೆ ಎಷ್ಟು ಪರಿಶ್ರಮವಿದೆ? ಹಾಗೆ ನಮಗೆ ಸುಲಭವಾಗಿ, ಸುಖವಾಗಿ ಇಲ್ಲಿ ವಿಷಯಗಳು ಗೋಚರವಾಗುತ್ತವೆ. ಅದರ ಹಿಂದೆ ಪರಮಪೂಜ್ಯರ ದೀರ್ಘ ಕಾಲದ ಪರಿಶ್ರಮ, ಸೂಕ್ಷ್ಮಮತಿಯ ಒಳನೋಟ, ನಿರ್ವಿಕಾರ ನಿಷ್ಪಕ್ಷಪಾತ ವಿಮರ್ಶೆಗಳು ಮುಪ್ಪುರಿಗೊಂಡಿವೆ.

ರಾಮಾಯಣಗಳು ಎಷ್ಟಿವೆ? ಸಂಸ್ಕೃತದಲ್ಲೇ ಅನೇಕ ರಾಮಾಯಣಗಳಿವೆ. ವಾಲ್ಮೀಕಿಯ ರಾಮಾಯಣ ಮೂಲಗ್ರಂಥ. ಅಧ್ಯಾತ್ಮ ರಾಮಾಯಣ, ಆನಂದರಾಮಾಯಣ, ಯೋಗವಾಸಿಷ್ಠ ರಾಮಾಯಣ – ಇವುಗಳನ್ನು ನಾವೆಲ್ಲಿ ಓದಿದ್ದೇವೆ? ಸ್ವಾಮಿ ಹರ್ಷಾನಂದಜಿ ಅವರು ಅವೆಲ್ಲವನ್ನೂ ಆಳವಾಗಿ ಅಧ್ಯಯನ ಮಾಡಿ, ವಾಲ್ಮೀಕಿ ರಾಮಾಯಣದ ಕಥೆಗೂ ಅವುಗಳ ಕಥೆಗೂ ಇರುವ ವ್ಯತ್ಯಾಸಗಳನ್ನೂ ಪರಿವರ್ತನೆಗಳನ್ನೂ ತಿಳಿಸುತ್ತಾರೆ. ಒಂದೊಂದರಲ್ಲೂ ಎಷ್ಟು ಕಾಂಡಗಳಿವೆ. ಸರ್ಗಗಳೆಷ್ಟು, ಶ್ಲೋಕಗಳೆಷ್ಟು ಎಂಬ ವಿವರಣೆ ನಮಗಿಲ್ಲಿ ಸಿಕ್ಕುತ್ತದೆ. ಇಂದಿನ ಭಾಷೆಗಳಲ್ಲಿ ರಾಮಾಯಣ ಸಾಹಿತ್ಯ, ಬೇರೆ ದೇಶಗಳಲ್ಲಿ ರಾಮಾಯಣದ ರೂಪಾಂತರಗಳು ಮುಂತಾದ ವಿಷಯಗಳೂ ಈ ವಿಶ್ವಕೋಶದಲ್ಲಿ ಚರ್ಚಿತವಾಗಿವೆ. ತುಳಸೀದಾಸರ ರಾಮಚರಿತ

ಮಾನಸದ ಬಗೆಗೆ, ಅದರ ಅವಧೀ ಭಾಷೆಯ ಬಗ್ಗೆ ಅಮೂಲ್ಯ ವಿಚಾರಗಳನ್ನು ಈ ವಿಶ್ವಕೋಶದಲ್ಲಿ ನಾವು ಕಾಣಬಹುದು.

ಪೌರಾಣಿಕ ವ್ಯಕ್ತಿಗಳ ಪರಿಚಯವನ್ನು ಪಡೆದುಕೊಳ್ಳುವುದಕ್ಕೆ ಈ ವಿಶ್ವಕೋಶ ಉತ್ತಮ ಖಜಾನೆ. ರಂತಿದೇವನ ವಿಷಯವನ್ನು ತೆಗೆದುಕೊಳ್ಳೋಣ. ಎಷ್ಟೋ ಜನರು ಇವನ ಹೆಸರನ್ನೇ ಕೇಳಿರುವುದಿಲ್ಲ. ಆದರೆ ಅವನೆಷ್ಟು ದೊಡ್ಡ ವ್ಯಕ್ತಿ! ಅವನಿಂದ ಒಂದು ನದಿಗೆ 'ಚರ್ಮಣ್ವತೀ' ಎಂಬ ಹೆಸರು ಬಂದಿತ್ತು. ಅದೇ ಇಂದಿನ ಚಂಬಲ್ ಕಣಿವೆಯ ಪ್ರದೇಶ. ನಮ್ಮ ದೇಶದ ಇತಿಹಾಸ ಈ ಹೆಸರುಗಳಲ್ಲಿ ಹುದುಗಿದೆ ಎಂಬ ಅರಿವು ಸಿಗುವುದು ಈ ವಿಶ್ವಕೋಶದಿಂದ.

ವಿಶ್ವಕೋಶವನ್ನು ರಚಿಸುವ ವ್ಯಕ್ತಿ ಪಕ್ಷಪಾತವಿಲ್ಲದೆ ಎಲ್ಲ ವಿಷಯಗಳನ್ನೂ ಸಮಾನದೃಷ್ಟಿಯಿಂದ ಪರಿಶೀಲಿಸಬೇಕಾಗುತ್ತದೆ. ವೈಯಕ್ತಿಕವಾಗಿ ಯಾವುದೋ ಒಂದು ಮತದಲ್ಲಿ ಅಥವಾ ದರ್ಶನದಲ್ಲಿ ಒಲುಮೆ ಇದ್ದರೂ, ಎಲ್ಲ ಮತಗಳನ್ನೂ, ದರ್ಶನಗಳನ್ನೂ, ದಾರ್ಶನಿಕರನ್ನೂ ಸಮಾನವಾಗಿ ಭಾವಿಸಿಕೊಂಡು ಅವರುಗಳ ಮಹತ್ತ್ವವನ್ನೂ ವೈಶಿಷ್ಟ್ಯವನ್ನೂ ಪ್ರತಿಪಾದಿಸಬೇಕು. ಇದು ಸಾಧಾರಣ ಜನರಿಗೆ ಸಾಧ್ಯವಿಲ್ಲ. ವ್ಯಕ್ತಿಗತ ಮಿತಿಯನ್ನು ದಾಟಿ ಸಾರ್ವತ್ರಿಕವಾಗಿ ಚಿಂತಿಸಿ ಪ್ರತಿಪಾದನೆ ಮಾಡುವುದು ಅಸಾಧಾರಣ ವ್ಯಕ್ತಿಗೆ ಮಾತ್ರ ಸಾಧ್ಯ.

ಈ ಅಸಾಧಾರಣ ವ್ಯಕ್ತಿತ್ವ ಮತ್ತು ಪಕ್ಷಪಾತರಾಹಿತ್ಯಗಳನ್ನು ನೋಡಲು ಈ ಗ್ರಂಥದಲ್ಲಿರುವ ಶಂಕರಾಚಾರ್ಯ, ರಾಮಾನುಜಾಚಾರ್ಯ ಮತ್ತು ಮಧ್ವಾಚಾರ್ಯ ಎಂಬ ಪದಗಳ ವಿವರಣೆಯನ್ನು ಓದಿದರೆ ಸಾಕು. ಪರಮಪೂಜ್ಯ ಹರ್ಷಾನಂದಜಿ ಅವರು ಎಲ್ಲ ಆಚಾರ್ಯರನ್ನೂ ಸಮಾನ ಗೌರವ ಭಾವನೆಯಿಂದ ಪರಿಚಯಿಸಿದ್ದಾರೆ. ಒಬ್ಬರನ್ನು ಮೇಲಕ್ಕೇರಿಸಿ ಇನ್ನೊಬ್ಬರನ್ನೂ ಕೆಳಗೆ ಕೂರಿಸಿಲ್ಲ. ಐತಿಹಾಸಿಕ ಸಂಗತಿಗಳನ್ನೂ ಪವಾಡ ಎಂದು ಕರೆಯಲಾಗುವ ಘಟನೆಗಳನ್ನೂ ಕಡೆಗಣಿಸದೆ ಎಲ್ಲ ಆಚಾರ್ಯರ ವ್ಯಕ್ತಿತ್ವದ ಚಿತ್ರಣಗಳನ್ನು ಪೂಜ್ಯರು ಮಾಡಿರುವುದು ಶ್ರೇಷ್ಠ ರೂವಾರಿಯ ಕುಸುರಿ ಕೆಲಸದಂತೆ ಓದುಗರ ಮನಸ್ಸಿಗೆ ಮುದವನ್ನು ನೀಡುತ್ತದೆ. ಇದೇ ರೀತಿಯಲ್ಲಿ, ಅದ್ವೈತ, ದ್ವೈತ, ವಿಶಿಷ್ಟಾದ್ವೈತಗಳ ನಿರೂಪಣೆ ನಮ್ಮ ಕಣ್ಣನ್ನು ತೆರೆಸುತ್ತದೆ. ಒಂದೊಂದು ದರ್ಶನದ ಸೂಕ್ಷ್ಮ ತತ್ತ್ವಗಳನ್ನು ತಿಳಿದುಕೊಳ್ಳಲು ಇಲ್ಲಿರುವ ಪೂರ್ವಾಗ್ರಹರಹಿತ ವಿಷಯ ಪ್ರತಿಪಾದನೆ ರಾಜಮಾರ್ಗವಾಗಿದೆ. ಸಾಮಾನ್ಯ ಜನರಿಗಷ್ಟೇ ಅಲ್ಲ, ವೇದಾಂತ ವಿದ್ವಾಂಸರಿಗೂ ಅದ್ವೈತ ದರ್ಶನದ ಒಳನೋಟಗಳು ಸುಲಭಗ್ರಾಹ್ಯವಲ್ಲ. ಆಭಾಸವಾದ, ಪ್ರತಿಬಿಂಬವಾದ, ಅವಚ್ಛೇದವಾದ ಇವು ಏಕೆ, ಹೇಗೆ, ಎಲ್ಲಿ, ಯಾವಾಗ ಹುಟ್ಟಿದುವು, ಆತ್ಮ, ಮಾಯೆ, ಅವಿದ್ಯೆ, ಬ್ರಹ್ಮ, ಮೋಕ್ಷಗಳ ಬಗೆಗೆ ಇವುಗಳ ಖಚಿತ ನಿಲುವು ಏನು? ಎಂಬ ಪ್ರಶ್ನೆಯನ್ನು ಕೇಳಿದಾಗ ಮಹಾಪಂಡಿತರೂ 'ತಿಣುಕಿದನು ಫಣಿರಾಯ' ಎಂಬ ಮಾತನ್ನು ಜ್ಞಾಪಿಸಿಕೊಳ್ಳುವಂತಾಗುತ್ತದೆ. ಆದರೆ ಈ ವಿಶ್ವಕೋಶದಲ್ಲಿ ಈ ಎಲ್ಲ ಪ್ರಶ್ನೆಗಳಿಗೂ ವಿಶದವಾದ, ಸುಲಭವಾದ ಉತ್ತರ ದೊರಕುತ್ತದೆ. ವಿಷಯವನ್ನು ನಿಖರವಾಗಿ ತಿಳಿದುಕೊಂಡ ವ್ಯಕ್ತಿ ಯಾವ ಪ್ರಶ್ನೆಗಾದರೂ ಸರಳ ಭಾಷೆಯಲ್ಲಿ, ಕೇಳಿದವರ ಮನ ಮೆಚ್ಚುವಂತೆ ಉತ್ತರಿಸಬಲ್ಲ. ವಿಷಯವನ್ನು ತಾನೇ ಸರಿಯಾಗಿ ತಿಳಿಯದವನು ಪ್ರಶ್ನೆ ಕೇಳಿದವನನ್ನು ದಾರಿ ತಪ್ಪಿಸಲು, ತನ್ನ ಅಜ್ಞಾನವನ್ನು ಮರೆಮಾಚಲು ಕಠಿಣ ಶಬ್ದಗಳ ಜಾಲವನ್ನು ಹರಡುತ್ತಾನೆ ಎನ್ನುತ್ತಾರೆ. ಪ್ರಸ್ತುತ ವಿಶ್ವಕೋಶದಲ್ಲಿ ಎಲ್ಲೂ ಅಂತಹ ಪಾಂಡಿತ್ಯ ಪ್ರದರ್ಶನದ ಆಡಂಬರವಿಲ್ಲ. ಸೂಕ್ಷ್ಮತಮವಾದ ವಿಚಾರಗಳನ್ನೂ ಸರಳ ಸುಂದರ ಸುಭಗ ಶಬ್ದಗಳಲ್ಲಿ ವಿವರಿಸಿದ್ದಾರೆ. ಇಲ್ಲಿನ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಇಂಗ್ಲಿಷಿನ ಸಾಮಾನ್ಯ ಜ್ಞಾನ ಇದ್ದರೆ ಸಾಕು.

ಈ ವಿಶ್ವಕೋಶದಿಂದ ಭಾರತ ದೇಶಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಅನೇಕ ಪೀಳಿಗೆಗಳಲ್ಲಿ ಜನಿಸಿದ ಪ್ರತಿಭಾಶಾಲಿ ಮಹಾನುಭಾವರು ಈ ದೇಶದ ಮನಸ್ಸನ್ನೂ ಮತಿಯನ್ನೂ ಹೇಗೆ ಪರಿಷ್ಕರಿಸಿದರೆಂಬುದನ್ನು ಕಂಡುಕೊಳ್ಳಲು ಈ ವಿಶ್ವಕೋಶ ಅತ್ಯುತ್ತಮ ಸಾಧನವೆನಿಸುತ್ತದೆ. ನೂರಾರು ಪುಟಗಳ ಪುಸ್ತಕದಲ್ಲಿ, ಹತ್ತಾರು ಲೇಖನಮಾಲೆಗಳಲ್ಲಿ ಹುಡುಕಿ ಹುಡುಕಿ ಕಂಡುಕೊಳ್ಳಬೇಕಾದ ಸತ್ಯಗಳು ಇಲ್ಲಿ ಒಂದು ಪುಟದಲ್ಲಿ, ಕೆಲವು ಬಾರಿ ಒಂದು ಪುಟ್ಟ ಸಾಲಿನಲ್ಲಿ ನಮಗೆ ಸ್ಪಷ್ಟವಾಗುತ್ತವೆ.

ಉದಾಹರಣೆಗೆ, ವೇದಗಳನ್ನು ರಕ್ಷಿಸಲು, ಯಜ್ಞಗಳನ್ನು ಎತ್ತಿ ಹಿಡಿಯಲು ಹೊರಟ ಮೀಮಾಂಸಾ ದರ್ಶನ ದೇವರ ಅಸ್ತಿತ್ವವನ್ನೇ ಏಕೆ ನಿರಾಕರಿಸಿತು ಎಂಬ ಪ್ರಶ್ನೆಗೆ ಇಲ್ಲಿ ಸ್ಪಷ್ಟ ಉತ್ತರವಿದೆ:

Another question that is discussed and discarded by the Mimamsa system is whether Isvara or God exists or not. Since all the materials that make up the physical world are eternally existing and since the *adrstas* or the karmas of the souls impel these materials in the process of creation, there is no need to accept any God as agent or author of creation.

(ಎರಡನೆಯ ಸಂಪುಟ, ಪುಟ ೩೨೦).

" ಮೀಮಾಂಸಾ ಶಾಸ್ತ್ರವು ವಿಚಾರ ಮಾಡಿ, ನಿರಾಕರಿಸಿದ ಪ್ರಶ್ನೆಯೆಂದರೆ, ಈಶ್ವರ ಅಥವಾ ದೇವರು ಇದ್ದಾನೆಯೋ, ಇಲ್ಲವೋ ಎಂಬುದು. (ಅವರ ಪ್ರಕಾರ) ಈ ಭೌತಿಕ ಜಗತ್ತನ್ನು ಉಂಟು ಮಾಡಿರುವ ಪದಾರ್ಥಗಳು ಎಂದೆಂದಿಗೂ ಇರುತ್ತವೆ ಮತ್ತು ಅದೃಷ್ಟಗಳು ಅಥವಾ ಜೀವಿಗಳ ಕರ್ಮಗಳು ಈ ಪದಾರ್ಥಗಳನ್ನು ಸೃಷ್ಟಿಕಾರ್ಯದಲ್ಲಿ ತೊಡಗಿಸುವುದರಿಂದ, ಸೃಷ್ಟಿಯ ಕರ್ತೃ ಅಥವಾ ಪ್ರತಿನಿಧಿಯಾಗಿ ಯಾವ ಬಗೆಯ ದೇವರನ್ನೂ ಒಪ್ಪಿಕೊಳ್ಳುವ ಆವಶ್ಯಕತೆ ಇಲ್ಲ."

ಶಾಸ್ತ್ರಗಳ ಒಳಗನ್ನು ಕಂಡು ಮರ್ಮವನ್ನೂ ತಿಳಿದವರಿಗೆ ಮಾತ್ರ ಈ ರಹಸ್ಯಗಳು ಬಿಚ್ಚಿಕೊಳ್ಳುವುದು. ಇದೇ ರೀತಿಯಲ್ಲಿ ಭಾರತೀಯ ದರ್ಶನ ಪ್ರಪಂಚದಲ್ಲಿ ಅತ್ಯಂತ ಕ್ಲಿಷ್ಟವಾದ ಪ್ರಶ್ನೆ 'ಖ್ಯಾತಿ' ಎಂಬ ಪರಿಕಲ್ಪನೆಯದು. (ಖ್ಯಾತಿ ಎಂದರೆ ಪ್ರಸಿದ್ಧಿ ಅಥವಾ ಕೀರ್ತಿ ಅಲ್ಲ, ಭ್ರಾಂತಿಯನ್ನು ವಿವರಿಸಲು ದಾರ್ಶನಿಕರು ಪ್ರಸ್ತುತ ಪಡಿಸುವ ಒಂದು ಪರಿ.) ಬೇರೆ ಬೇರೆ ದಾರ್ಶನಿಕರು ಖ್ಯಾತಿಯನ್ನು ತಮ್ಮ ತಮ್ಮ ಮೂಗಿಗೆ ನೇರವಾಗಿ ವಿವರಿಸಲು ಯತ್ನಿಸಿದ್ದಾರೆ. ಪ್ರಾಭಾಕರ ಮೀಮಾಂಸಕರು 'ಅಖ್ಯಾತಿ'ಯನ್ನೂ, ಅದ್ವೈತ ವೇದಾಂತಿಗಳು 'ಅನಿರ್ವಚನೀಯ ಖ್ಯಾತಿ'ಯನ್ನೂ, ನೈಯಾಯಿಕರು (ನ್ಯಾಯಶಾಸ್ತ್ರದ ಅನುಯಾಯಿಗಳು) 'ಅನ್ಯಥಾ ಖ್ಯಾತಿ'ಯನ್ನೂ, ಬೌದ್ಧ ಮಾಧ್ಯಮಿಕರು 'ಅಸತ್ ಖ್ಯಾತಿ'ಯನ್ನೂ, ಬೌದ್ಧ ಯೋಗಾಚಾರ ಪಂಥದವರು 'ಆತ್ಮ ಖ್ಯಾತಿ'ಯನ್ನೂ, ಸಾಂಖ್ಯರು 'ಸದಸತ್ ಖ್ಯಾತಿ'ಯನ್ನೂ ಹೇಳಿದ್ದಾರೆ. ಇದೊಂದು ಪರಿಕಲ್ಪನೆಯೇ ಹಲವು ಗ್ರಂಥಗಳ ರಚನೆಗೆ ಮೂಲವಾಗಿದೆ. ಇಷ್ಟು ಕ್ಲಿಷ್ಟವಾದ ವಿಷಯವನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಕೇವಲ ಒಂದೂವರೆ ಪುಟದಲ್ಲಿ ಪರಮಪೂಜ್ಯ ಹರ್ಷಾನಂದಜಿ ಅವರು ವಿವರಿಸಿರುವುದು ಕಬ್ಬಿಣದಂತಹ ಕಡಲೆಯನ್ನು ಬೇಯಿಸಿ, ಸಿಹಿ ಹೂರಣ ಮಾಡಿ, ಬಾಳೆ ಎಲೆಯಲ್ಲಿ ಬಡಿಸುವುದಕ್ಕಿಂತ ಸಣ್ಣ ಪವಾಡವಲ್ಲ. ಈ ಪುಟಗಳನ್ನು ಓದುವಾಗ ಬೆರಗುಗೊಂಡ ನನ್ನ ಮನಸ್ಸು ಪರಮಪೂಜ್ಯರನ್ನು ನೆನೆನೆನೆದು 'ನಮೋ ನಮೋ' ಎನ್ನುತ್ತಿತ್ತು.

ಇದೇ ತೆರನಾಗಿರುವುದು ಮಾಂಡೂಕ್ಯಕಾರಿಕೆಗಳ ವಿವರಣೆ. ಶ್ರೀಶಂಕರಾಚಾರ್ಯರ ಪರಮಗುರುಗಳಾಗಿದ್ದ ಗೌಡಪಾದರ ಕಾರಿಕೆಗಳ ಗೂಢಾರ್ಥವನ್ನು ತಿಳಿದುಕೊಳ್ಳುವುದು ಸಂಸ್ಕೃತಜ್ಞರಿಗೂ ಸುಲಭವಲ್ಲ. 'ಅಸ್ಪರ್ಶಯೋಗ' ಎಂಬ ನಿಗೂಢ ಗಂಟನ್ನು ಬಿಚ್ಚಿ ಸರಳೀಕರಿಸಿ ವಿವರಿಸಿರುವುದು ನಮ್ಮಂಥ ಸಾಮಾನ್ಯ ಜನರಿಗೆ ಅನುಗ್ರಹವೇ.

ಹಿಂದೂ ಧರ್ಮದ ವಿಶ್ವಕೋಶ ಎಂದಾಗ ಹಿಂದೂ ಧರ್ಮ ಎಂದರೆ ಏನು? ಎಂಬ ಪ್ರಶ್ನೆ ಪ್ರಸಕ್ತವಾಗುತ್ತದೆ. ಇಂದು ಈ ಬಗೆಗೆ ನಾನಾ ವ್ಯಾಖ್ಯಾನಗಳು ನಡೆಯುತ್ತಿವೆ. ಹಿಂದೂ ಧರ್ಮವೆಂಬ ಕಲ್ಪನೆಯೇ ಸರಿಯಲ್ಲ ಎಂದೂ ವಾದಿಸುವವರಿದ್ದಾರೆ. ಹಿಂದೂಗಳು ಎಂದರೆ ಯಾರು ಎಂಬ ಬಗೆಗೂ ಗೊಂದಲವಿದೆ. ಪರಮಪೂಜ್ಯ ಹರ್ಷಾನಂದಜಿ ಅವರು ಈ ವಿಷಯದಲ್ಲಿ ಖಚಿತ ನಿಲುವನ್ನು ಹೊಂದಿದ್ದಾರೆ. ಎಲ್ಲ ಸಂಭವನೀಯ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದಾರೆ. ವಿಶ್ವಕೋಶವನ್ನು ಬಳಸಲು ಇಷ್ಟಪಡುವವರು ಮೊದಲು Hinduism ಎಂಬ ಪದದ ಬಗೆಗೆ ಇರುವ ಸವಿಸ್ತಾರವಾದ ವಿವರಣೆಯನ್ನು ಓದಿ ಮುಂದುವರಿಯುವುದು ಒಳ್ಳೆಯದು.

"Hinduism is a comprehensive system that incorporates in itself all aspects of human life; philosophy, religion, ethics, all facts of culture including the various arts, science and literature."

"ಹಿಂದೂಧರ್ಮವು ಮಾನವ ಜೀವಿತದ ಎಲ್ಲ ಅಂಶಗಳನ್ನೂ ತನ್ನಲ್ಲಿಯೇ ಒಳಗೊಂಡ ಸಮಗ್ರ ವ್ಯವಸ್ಥೆ. ಅದರಲ್ಲಿ ತತ್ತ್ವಶಾಸ್ತ್ರ, ಧರ್ಮ, ನೀತಿ, ಕಲೆ, ವಿಜ್ಞಾನ ಮತ್ತು ಸಾಹಿತ್ಯಗಳೂ ಸೇರಿದಂತೆ ಸಂಸ್ಕೃತಿಯ ಎಲ್ಲಾ ಅಂಶಗಳೂ ಅಡಕವಾಗಿವೆ"

ಎಂದು ವ್ಯಾಪಕವಾದ ಅರ್ಥದಲ್ಲಿ ಹಿಂದೂಧರ್ಮ ಶಬ್ದವನ್ನು ಅರ್ಥೈಸಿ ಪರಮಪೂಜ್ಯರು ವಿಷಯಗಳನ್ನು ನಿರೂಪಿಸಿದ್ದಾರೆ. ಮತಾಂತರ ಮುಂತಾದ ಸಂವೇದಿ ವಿಷಯಗಳ ಬಗೆಗೂ ಈ ಸಂದರ್ಭದಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಆಧುನಿಕ ಯುಗದಲ್ಲಿ ಧರ್ಮದ ಮೇಲೆ ಎರಗಿರುವ ಪೀಡೆಗಳನ್ನೂ ಪಿಡುಗುಗಳನ್ನೂ ವಿಶ್ಲೇಷಿಸಿದ್ದಾರೆ.

ಪ್ರತಿಯೊಬ್ಬ ಹಿಂದುವೂ, ಮೇಲೆ ತಿಳಿಸಿದ ಹಾಗೆ ಹಿಂದೂ ಧರ್ಮದ ಬಗ್ಗೆ ಸಮಗ್ರ ಮಾಹಿತಿ ನೀಡುವ, ಈ ವಿಶ್ವಕೋಶದ ಎರಡನೆಯ ಸಂಪುಟದ ಹನ್ನೆರಡು ಪುಟಗಳನ್ನು (೨೪ ರಿಂದ ೩೫) ಓದಬೇಕು. ಈ ಪುಟಗಳನ್ನು ಭಾರತದ ಎಲ್ಲ ಭಾಷೆಗಳಿಗೂ ಅನುವಾದಿಸಿ ಲಕ್ಷಾಂತರ ಪ್ರತಿಗಳನ್ನು ಮುದ್ರಿಸಿ, ಎಲ್ಲ ಜನರಿಗೂ ಹಂಚಬೇಕು. ಆಗ ಹಿಂದುಗಳಿಗೆ ತಮ್ಮ ಧರ್ಮದ ಸ್ವರೂಪಜ್ಞಾನ ವುಂಟಾಗಿ, ಅವರ ಮನಸ್ಸಿನಲ್ಲಿರಬಹುದಾದ ಅಳುಕು–ಅಂಜಿಕೆಗಳು ದೂರ ಸರಿಯುತ್ತವೆ. ಬೇರೆ ಧರ್ಮಗಳ ಅನುಯಾಯಿಗಳಿಗೂ ಅವರ ತಪ್ಪು ಕಲ್ಪನೆಗಳನ್ನು ತೊಲಗಿಸಲು ಅನುಕೂಲವಾದೀತು.

ಮೂರನೆಯ ಸಂಪುಟದ ಕೊನೆಯಲ್ಲಿರುವ ಎರಡು ದೀರ್ಘ ಲೇಖನಗಳು ಶಾಂಡಿಲ್ಯನ ಭಕ್ತಿಸೂತ್ರಗಳ ಬಗೆಗೂ, ವೈದಿಕ ಯಜ್ಞಗಳ ಬಗೆಗೂ ಅರಿವನ್ನು ಮೂಡಿಸುತ್ತವೆ. ಅಲ್ಲಿ ಕೊಟ್ಟಿರುವ ಯಜ್ಞೋಪಕರಣಗಳ ಚಿತ್ರಗಳು ಅತ್ಯಂತ ಅಪೂರ್ವವೂ ಉಪಕಾರಕವೂ ಆಗಿವೆ. ಅಂತೆಯೇ ಕಡೆಯಲ್ಲಿ ಕೊಡಲಾಗಿರುವ ಪರಮಹಂಸರ, ಶ್ರೀಶಾರದಾದೇವಿಯವರ ಮತ್ತು ವಿವೇಕಾನಂದರ ಭಾವಚಿತ್ರಗಳು ಅದ್ಭುತವಾಗಿವೆ. ಪ್ರತಿಯೊಂದು ಸಂಪುಟದ ಅಂತ್ಯದಲ್ಲಿ ಇರುವ ಚಿತ್ರವಿಭಾಗ (photo section) ನಮ್ಮ ಅರಿವಿಗೆ ಹೊಸ ಆಯಾಮವನ್ನು ನೀಡುವಷ್ಟು ಭವ್ಯವಾಗಿದೆ.

ಎಲ್ಲ ಭಾರತೀಯರೂ ಹೆಮ್ಮೆ ಪಡಬಹುದಾಗಿರುವಂತೆ ಸೊಗಸಾಗಿ ಅಚ್ಚುಕಟ್ಟಾಗಿ ಮೂಡಿಬಂದಿರುವ A Concise Encyclopedia of Hinduism ಯಾವುದೇ ಗ್ರಂಥಾಲಯಕ್ಕೆ ಅನರ್ಘ್ಯ ಭೂಷಣ. ಈ ಗ್ರಂಥವು ನಮ್ಮ ತಾಯಿನುಡಿ ಕನ್ನಡದಲ್ಲೂ ಬರಲಿ ಎಂದು ಹೃದಯ ಆಶಿಸುತ್ತದೆ. ಇದನ್ನು ಲೋಕಕ್ಕೆ ಅರ್ಪಿಸಿರುವ ಪರಮಪೂಜ್ಯ ಹರ್ಷಾನಂದಜಿ ಅವರಿಗೆ ಕೃತಜ್ಞತೆಯನ್ನು ಎಂತು ಸಲ್ಲಿಸುವುದು? **"ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ"** (ಮತ್ತೆ ಮತ್ತೆ ನಿಮಗೆ ನಮಸ್ಕಾರಗಳನ್ನು ಸಲ್ಲಿಸುತ್ತೇವೆ) ಎಂದು ಮಾತ್ರ ನಾವು ಹೇಳಬಹುದಷ್ಟೆ.